Doc-487
T-P-2

Reg No B G 155 31—5—72

55th Year of Publication ‘Satyavadi’ daily, Mysore 4

In the State – The First
Golden Jubilee
Celebrated Paper
★
News, Views, Dharmic
Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂರಮೇರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಸೆಸೆ

ಕಾಂಗ್ರೆಸಿಗರು ಮೊದಲು ಭೂಮಿ ಕೊಡಲಿ — ಶಿವಪ್ಪನವರ ನಿರ್ಣಯ

ಸೂಪರ್ ಇಲಿಗಳು

ಆಸ್ಟ್ರೇಲಿಯಾದಲ್ಲಿ ತಾಯಿ ಇಲಿಗಳ ಗರ್ಭದಲ್ಲಿರುವಾಗ ಹಾಸ್ಪೋನ್ ಇಂಜೆಕ್ಷನ್ ಇತ್ತು ಅನಂತರ ಜನಿಸಿದ ಇಲಿಗಳು ವಿಶಾಲ ಮೆದುಳು ಹಾಗೂ ಹೆಚ್ಚು ಬುದ್ಧಿವಂತಿಕೆ ಇರುವ ಸೂಪರ್ ಇಲಿಗಳು ಜನಿಸಿವೆ.

★

ರಾಜ್ಯಪಾಲರಿಗೆ ಸನ್ಮಾನ

ಮೈಸೂರು ಪುರಸಭೆ ಮೈಸೂರು ರಾಜ್ಯಪಾಲರಿಗೆ ಜೂನ್ 4 ನೇ ತಾ|| ಸಂಜೆ 5 ಗಂಟೆಗೆ ಮಾನಪತ್ರ ಸಮರ್ಪಣೆ ಮಾಡುವುದು.

○

ಉದ್ಘಾಟನೆ

ಜೂನ್ 5 ನೇ ತಾ|| ಬೆಳಿಗ್ಗೆ 10 ಗಂಟೆಗೆ ಮಹಾರಾಜಾ ಕಾಲೇಜ್ ಶತಮಾನೋತ್ಸವ ಭವನದಲ್ಲಿ ಮೈಸೂರು ರಾಜ್ಯಪಾಲರವರು ಭಾರತ ಸರ್ವೆ ಸಮ್ಮೇಳನ ಉದ್ಘಾಟನೆ ಮಾಡುವರು.

★

ಬದಲಾವಣೆ ಕೂಡದು

ಪಶ್ಚಿಮ ಬಂಗಾಳದ ಹೆಸರು ಬದಲಾವಣೆ ಮಾಡಬೇಕೆಂದು ಒಂದು ತಂಡದವರು ಹೇಳುತ್ತಿರುವದನ್ನು ಅದರ ಬಗೆಗೆ ಬಂಗಾಳ ಪ್ರಾಂತೀಯ ಹಿಂದೂ ಮಹಾಸಭೆಯು ಇದೇ ಹೆಸರು ಇರಬೇಕೆಂದು, ಹೆಸರು ಬದಲಾವಣೆಗೆ ಯಾವ ಕಾರಣವೂ ಇಲ್ಲವೆಂದು ನಿರ್ಣಯಿಸಿದೆ

★

ರಷ್ಯಾಕ್ಕೆ ರಫ್ತು

ನವದೆಹಲಿ– 1972 ವ್ಯಾಪಾರ ಯೋಜನೆಯಂತೆ ರಷ್ಯಾಕ್ಕೆ ರೂ 263 ಕೋಟಿ ಯಷ್ಟು ರಫ್ತು ಮಾಡಲಾಗುವುದು.

ಮೈಸೂರು ಡಿ. ಸುಬ್ಬಯ್ಯಾ ರಸ್ತೇಲಿರುವ ಡಾ|| ಬಿ. ಜಿ. ದಾಸ್‌ರವರ ಹೊಸ ಫೋನ್ ನಂ 23142

ಖಾಸಗಿ ಶಾಲೆಗಳು

ಬೆಂಗಳೂರು — ನಗರದಲ್ಲಿ ಇಲಾಖೆ ಮನ್ನಣೆ ತಪ್ಪಿ ಮುಚ್ಚಲಾಗಿರುವ 8 ಖಾಸಗಿ ಶಾಲೆಗಳ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳ ಹಿತ ರಕ್ಷಣೆ ಬಗ್ಗೆ ಸೆಕೆಂಡರಿ ಸ್ಕೂಲು ಉಪಾಧ್ಯಾಯಕ ಸಂಘದ ಕೋರಿಕೆಯನ್ನು ವಿದ್ಯಾಮಂತ್ರಿಗಳೂ ವಿದ್ಯಾ ಇಲಾಖೆಯವರೂ ಒಪ್ಪಿರುವರು.

○

ಅಗ್ನಿ ಅನಾಹುತ

ಚಂಡೀಘರ್— ಪಂಜಾಬು ವ್ಯವಸಾಯ ಮಂತ್ರಿಯವರ ಕೊಠಡಿಯಲ್ಲಿ ಆದ ಅಗ್ನಿ ಅನಾಹುತದಲ್ಲಿ ಸರಕಾರಿ ಫೈಲು, ಪೀಠೋಪಕರಣಗಳು ಮತ್ತಿತರ ಕೆಲವು ಪದಾರ್ಥಗಳು ನಾಶವಾದವು.

●

ಬಸ್‌ನಲ್ಲಿ ಹೆರಿಗೆ

ತಿರುವೇಂಡ್ರಂ— ಆಸ್ಪತ್ರೆಗೆ ಹೋಹಾರೋಗ್ಯ ಪರೀಕ್ಷಿಸಲ್ಪಡಲು ಬಸ್ಸಿನಲ್ಲಿ ಹೋಗುತ್ತಿದ್ದ ಒಬ್ಬ ಗರ್ಭಿಣಿ ಹೆಂಗಸು ಬಸ್ಸಿನಲ್ಲೇ ಹೆತ್ತಳು – ನಂತರ ಅದೇ ಬಸ್ಸಿನಲ್ಲಿ ಆಸ್ಪತ್ರೆಗೆ ಕರೆದೊಯ್ಯಲ್ಪಟ್ಟಳು.

★

ಕೇಂದ್ರ ಸರಕಾರದ ಆದಾಯ

ನವದೆಹಲಿ— 71–72 ರಲ್ಲಿ ಕೇಂದ್ರ ಸರಕಾರದ ತೆರಿಗೆಗಳ ಆದಾಯ ರೂ. 3803 15 ಕೋಟಿ ; ಇದು ಹಿಂದಿನ ವರ್ಷಕ್ಕಿಂತಲೂ ರೂ. 667.91 ಕೋಟಿ ಹೆಚ್ಚು

ಡೆಲ್ಲಿ – ಮೈಸೂರು

ನವದೆಹಲಿ— ಡೆಲ್ಲಿ ಮತ್ತು ಮೈಸೂರು ಮಧ್ಯೆ ವಿಮಾನರುಗೇಜಿನ ಮೇಲೆ ವೇಗದ ಡಿಸೆಲ್ ರೈಲು ಓಡಾಟ ಸಾಧ್ಯವಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಭುಟ್ಟೋ ಹೇಳಿಕೆ

ನವದೆಹಲಿ— ಭಾರತದಲ್ಲಿರುವ 90000 ಪಾಕ್ ಖೈದಿಗಳ ಬಿಡುಗಡೆ ಮತ್ತು ಕಾಶ್ಮೀರ ಭಾಗದಿಂದ ಭಾರತ ಸೈನ್ಯ ವಾಪಸಾದರೆ, ತಾವು ಬಂಗ್ಲಾದೇಶಕ್ಕೆ ಮನ್ನಣೆ ಕೊಡುವುದಾಗಿ ಕರಾಚಿಯಲ್ಲಿ ಪಾಕಿಸ್ತಾನ ಅಧ್ಯಕ್ಷ ಭುಟ್ಟೋ ಹೇಳಿರುವುದಾಗಿ ವರದಿಯಾಗಿದೆ

★

ತುಟ್ಟಿ ಭತ್ಯೆ

ನವದೆಹಲಿ— ಕೇಂದ್ರವು ತನ್ನ ನೌಕರರಿಗೆ ತುಟ್ಟಿಭತ್ಯೆ ಹೆಚ್ಚಿಸುವಾಗಿ ರಾಜ್ಯ ಸರಕಾರಗಳೆಡನೆ ಪರ್ಯಾಲೋಚಿಸಲಾಗುವುದೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು

★

ಶಿವಪ್ಪನವರ ನಿರ್ಣಯ

ಬೆಂಗಳೂರು ಕಾಂಗ್ರೆಸಿಗರು ತಮ್ಮ ಹೆಚ್ಚುವರಿ ಭೂಮಿಯನ್ನು ಸರ್ಕಾರಕ್ಕೆ ಒಪ್ಪಿಸಬೇಕೆಂದು, ಏಕಸ್ವಾಮಿತ್ವ ಕೈಗಾರಿಕೆಗಳನ್ನು ಸಮಾಜಪಾದಿ ತತ್ವಕ್ಕೆ ಒಳಪಡಿಸಬೇಕೆಂದು, ಸರ್ವ ಹಂತದಲ್ಲೂ ಕನಿಷ್ಠ ಹಾಗೂ ಗರಿಷ್ಠ ವರಮಾನ ನಿಗದಿ ಮಾಡಬೇಕೆಂದು – ಈ ನಿರ್ಣಯಗಳನ್ನು ಮುಂದಿನ ತಿಂಗಳು ದೆಹಲಿಯಲ್ಲಿ ಸಮಾವೇಶಗೊಳ್ಳುವ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆಗೆ ಶ್ರೀ ಎಸ್. ಶಿವಪ್ಪ ಕಳಿಸಿರುವರು.

ಜಾರಿಗೆ ಬಂತು

ನವ ದೆಹಲಿ ಲಾಟರಿಗಳು ಮತ್ತು ಚಕ್ಕಬಂಧ ಬಹುಮಾನಗಳ ಮತ್ತು ಕಂಟ್ರಾಕ್ಟರು ಹಾಗೂ ಉಪ ಕಂಟ್ರಾಕ್ಟರುಗಳಿಗೆ ಪಾವತಿ ಮಾಡುವ ಹಣದ ತೆರಿಗೆಯನ್ನು ಮೂಲದಲ್ಲೇ ಜೂನ್ 1 ರಿಂದ ಕಳೆದುಕೊಳ್ಳಲಾಗುವುದು.

★

ಸಮ್ಮೇಳನ

ಬೆಂಗಳೂರು ಬೀಡಿ ಮತ್ತು ಗೇರು ಪೊಪ್ಪು ಕೈಗಾರಿಕೆಗಳಲ್ಲಿ ಕನಿಷ್ಠ ಕೂಲಿ ನಿಗದಿ ಮಾಡಲು ಅಂತರ ರಾಜ್ಯ ಕಾರ್ಮಿಕ ಮಂತ್ರಿಗಳ ಸಭೆ ಮುಂದಿನ ತಿಂಗಳು 24 ಮತ್ತು 25 ನೇ ತಾ|| ಗಳಲ್ಲಿ ನಡೆಯುವುದು.

★

ಪೌರ ಸನ್ಮಾನ

ಮೈಸೂರು— ಪುರಸಭೆಯು ಲೋಕೋಪಯೋಗಿ ಮಂತ್ರಿ ಶ್ರೀ ಚನ್ನಬಸಪ್ಪನವರಿಗೆ ಮಂಗಳವಾರ ಟೌನ್‌ಹಾಲ್‌ನಲ್ಲಿ ಸನ್ಮಾನ ಸಮಾರಂಭ ಏರ್ಪಡಿಸಿತ್ತು ; ಪುರಸಭಾಧ್ಯಕ್ಷ ಶ್ರೀ ಸೋಮಸುಂದರಂರವರು ಬಿನ್ನವತ್ತಳೆ ಅರ್ಪಿಸಿ ಕಲವು ಕೋರಿಕೆಗಳನ್ನು ಕೋರಿದರು : ಪುರಸಭಾ ಉಪಾಧ್ಯಕ್ಷ ಶ್ರೀ ಅಪ್ಪಾಜಪ್ಪನವರು ವಂದನಾರ್ಪಣೆ ಮಾಡಿದರು.

★

ಕನ್ನಡಕ್ಕೆ ಅಲಕ್ಷ್ಯ

ಮದರಾಸು— ತಮಿಳುನಾಡಿನಿನ 1 ರಿಂದ 8 ಸ್ಟ್ಯಾಂಡರ್ಡ್‌ಗಳು ಪಾಠಕ್ರಮದ ಕರಡು ಪ್ರತಿಯಲ್ಲಿ ಕನ್ನಡವನ್ನು ವಿದ್ಯಾಭ್ಯಾಸದ ಮುಖ್ಯಾಧಿಕಾರಿಗಳು ಬಿಟ್ಟಿರುವುದನ್ನು ಅಯನಾವಾರಂ ಕನ್ನಡ ಸಂಘವು ಕಟುವಾಗಿ ಟೀಕಿಸಿದೆ.

★

For Mosquito Nets Simply Go To – Bank Road, Bahusar, Mysore

ಆರಮನೆಗೆ ಪ್ಲಾಸ್ಟಿಕ್ ಹೊದಿಕೆ

ಮ್ಯೂನಿಚ್ (ಡಾಡ್)— ಫೆಡರಲ್ ರಿಪಬ್ಲಿಕ್ ಜರ್ಮನಿಯ ಒಲಂಪಿಕ್ ನಗರದ ಹತ್ತಿರವಿರುವ ಪ್ರಿನ್ಸ್‌ಕಾರ್ಲ್ ಆರಮನೆಯನ್ನು 400000 ಡಿ.ಎಂ. ಗಳ ವೆಚ್ಚದ ಪ್ಲಾಸ್ಟಿಕ್ ಹೊದಿಕೆಯಿಂದ ರಕ್ಷಿಸಲಾಗಿದೆ ; 1803 ರಲ್ಲಿ ಕಟ್ಟಲಾಡ ಈ ಈ ಆರಮನೆಗೆ ದುರಸ್ತಿ ಕಾರ್ಯಗಳು ನಡೆಯಬೇಕಾಗಿದೆ.

ನ್ಯಾಯಬಾಹಿರ ಮಕ್ಕಳು

ಸ್ವೀಡನ್ನಿನಲ್ಲಿ ಮದುವೆಯನ್ನು ನಿರಾಕರಿಸುತ್ತಿರುವಾಗ, ಅಲ್ಲಿಯ ಮಕ್ಕಳಲ್ಲಿ ೨ ನೇ 1 ಭಾಗ ಅವಿವಾಹಿತ ತಾಯಂದಿರಿಗೆ, ನ್ಯಾಯಬಾಹಿರವಾಗಿ ಹುಟ್ಟುತ್ತಿವೆ ; 1960 ರಲ್ಲಿ ನ್ಯಾಯಬಾಹಿರವಾಗಿ ಹುಟ್ಟಿದ ಮಕ್ಕಳು ಶೇಕಡ 10 ರಷ್ಟಿದ್ದದ್ದು 1970 ರಲ್ಲಿ ಶೇಕಡ 18 ಕ್ಕೆ ಹೆಚ್ಚಿತು.

ಕ್ರೈಸ್ತ ನಂಬಿಕೆಯಲ್ಲಿ ಕ್ರಮಕ್ರಮವಾಗಿ ಬಲ ಕುಂದುತ್ತಿದ್ದು, ಚರ್ಚ್ ನಾಯಕರಲ್ಲೂ ತಗ್ಗುತ್ತಿರುವುದೆನ್ನಲಾಗಿದೆ

ಈಗ 10 ವರ್ಷಗಳಲ್ಲಿ ಪ್ರತಿ 3 ವಿವಾಹಗಳನ್ನು ಒಂದು ವಿಚ್ಛೇದಿಸುತ್ತಿದೆ. 1960 ರಲ್ಲಿ 8958 ವಿವಾಹವಿಚ್ಛೇದನೆಗಳಾಗಿದ್ದುದು, 1969 ರಲ್ಲಿ 12238 ಕ್ಕೆ ಹೆಚ್ಚಿದೆ.

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ '
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

ಆ ನೆ - ಹು ಡು ಗ

ವುಡ್‌ಲ್ಯಾಂಡ್ 26-5-72ರಿಂದ ಅಮೋಘ 4ನೇ ವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃ ದ ಯ ಸಂ ಗ ಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ
ನಿರ್ದೇಶನ : ರಾಜಶ್ರೀ ಸಹೋದರರು ನಿರ್ಮಾಪಕರು : ಎಂ ಜೆ ಎಂ ಸಹೋದರರು
ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಚದುರಂಗ

ಅಪೆರಾ 26 5 72 ರಿಂದ

ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ [ವಯಸ್ಕರಿಗೆ ಮಾತ್ರ]

ಜ ರೂ ರ ತ್

ಪಾತ್ರ– ರಿನ ರಾಯ್, ವಿಜಯ ಅರೋರ, ಅಸಿತ್ ಸೇ, ಹುನಪೋಹನ ಕೃಷ್ಣ
ಜಾನಿ ವಿಸ್ಕಿ, ಡಾನಿಡೆ ಜೊಪ್ಪ
ನಿರ್ದೇಶನ– ಬಿ ಆರ್. ಇಶಾರ ಸಂಗೀತ–ಬ್ರಿಜ್ ಭೂಷಣ್
ದಿನ 3 ಆಟಗಳು

Protect the Cow

SHAKTI
SUDHA

A Superb Tonic

Contribute Liberally
to the National Defence Fund

Quality Printing Neat Binding

Lakshminarasimha Press

Sivarampet, Mysore

Help The Gorakshana



— Humanitarian Propoganda Monthly ....

ಅಖಿಲ ಭಾರತದಲ್ಲಿ ಕೂಡಲೇ
ಗೋವಧೆ ನಿಷೇಧವಾಗಲಿ

Edited Printedand Published by Dharmapracharanirata
M S Krishna Rao (Propretor) at the Satyavadi Press
Chamarajapuram Mysore 4